**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.592/2023**

**ಸಿ.ಡಬ್ಲ್ಯೂ- 4 ಪಿ.ಡಬ್ಲ್ಯೂ- 4**

| | | |
|---|---|---|
| ಸಾಕ್ಷಿದಾರರ ಹೆಸರು | : | ಚಿಕ್ಕಮ್ಮ |
| ತಂದೆಯ/ ಗಂಡನ ಹೆಸರು | : | ನಿಂಗನಾಯಕ |
| ವಯಸ್ಸು | : | 70 ವರ್ಷ |
| ಉದ್ಯೋಗ | : | - |
| ವಾಸ ಸ್ಥಳ | : | ಹಲಸೂರು |

**ದಿನಾಂಕ 16.05.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ನನ್ನ ಮಗಳು . ಚಾಸಾ 5 ಮತ್ತು 6 ಗೊತ್ತು . ಸುಮಾರು 3 ವರ್ಷಗಳ ಹಿಂದೆ 9.00 ಗಂಟೆ ಸಮಯದಲ್ಲಿ ಆರೋಪಿ 1 ಮತ್ತು 2 ರವರು ಕೈಯಲ್ಲಿ ದೊಣ್ಣೆ, ಆರೋಪಿ 3 ರವರು ರಾಡು ಹಿಡಿದುಕೊಂಡು ಕಿಟಕಿ , ಬಾಗಿಲು , ಬೀರು , ಸೂಟ್ ಕೇಸ್ , ಕನ್ನಡಿ , ಹೆಂಚು ಅನ್ನು ಹೊಡೆದಿರುತ್ತಾರೆ . ಅದರಿಂದ 70 ರಿಂದ 80 ಸಾವಿರ ನಷ್ಟ ಆಗಿರುತ್ತದೆ. ಮನೆಗೆ ಏಣಿ ಹಾಕಿ ಹತ್ತಿ ಹೆಂಚು ಹೊಡೆದಿರುತ್ತಾರೆ. ನಂತರ ಚಾಸಾ 1 ರವರು ಹೊಳೆ ಹತ್ತಿರ ಬಟ್ಟೆ ಹೊಗೆಯುತ್ತಿದ್ದು ಅವರನ್ನು ಕರೆದುಕೊಂಡು ಬಂದಿರುತ್ತೇನೆ . ಮುದ್ದೆಮಾಲು 1 ರಿಂದ 3 ಅನ್ನು ನೋಡಿ ಗುರುತಿಸಿರುತ್ತಾರೆ .

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಆರೋಪಿತರು ಮನೆ ಬೀಗ ಹೊಡೆದು ಮನೆ ಒಳಗೆ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ . ಟಿಪಾಯಿ , ಬೀರು , ಟಿ.ವಿ. ಶೋಕೇಸ್, ಅಡುಗೆ ಕೋಣೆಯ ಕಿಟಕಿ ಹೊಡೆದು ಸುಮಾರು 91,840 ರೂ. ನಷ್ಟ ಮಾಡಿರುತ್ತಾರೆ ಎಂದರೆ ಸರಿ . ಸಾಕ್ಷಿಗೆ ಕೃತ್ಯ ನಡೆದ ಮನೆಯ ಪೋಟೋಗಳನ್ನು ತೋರಿಸಿದ್ದು ಅವುಗಳನ್ನು ಗುರುತಿಸಿರುತ್ತಾರೆ . ಅದು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ರೂ. 200/- ವೆಚ್ಚದೊಂದಿಗೆ ಮುಂದೂಡಲಾಯಿತು.**

**ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**1 ನೇ ಆರೋಪಿ ಪರ ವಕೀಲರು 2 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲಾಗಿ ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು, ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**